**<u>ಸಾಕ್ಷಿಗೆ ದಿನಾಂಕ *22-08-2025* ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : *1* ನೇ ಎದರುದಾರರ ಪರ ಶ್ರೀ ಎನ್ ಡಿ ಸಿ ವಕೀಲರಿಂದಃ</u>**

ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನು ಮಾಹಿತಿ ನೀಡಿರುತ್ತೇನೆ. ಭೂ ಸ್ವಾಧೀನ ಆಗುವಾಗ ಅರ್ಜಿದಾರರು ಕೂಡಿಯೇ ಇದ್ದರು ಎಂದರೆ ಸರಿ. ದಾವಾ ಆಸ್ತಿಯನ್ನು ಕೆನಲ್ ಗೊಸ್ಕರ ಸ್ವಾಧೀನ ಮಾಡಿಕೊಂಡಿರುತ್ತಾರೆ. ನಮ್ಮ ಊರಿನಲ್ಲಿ ಸಾಕಷ್ಟು ಜಮೀನುಗಳು ಭೂ ಸ್ವಾಧೀನ ಆಗಿರುತ್ತವೆ. ಜಮೀನು ಸ್ವಾಧೀನ ಆಗಿರುವ ಬಗ್ಗೆ ನಮ್ಮ ಮನೆಯಲ್ಲಿ ಎಲ್ಲರಿಗೂ ಗೊತ್ತಿರುತ್ತದೆ. ಯಾವ ವರ್ಷದಲ್ಲಿ ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದು ನೆನಪಿರುವುದಿಲ್ಲ. ಸ್ವಾಧೀನ ಪಡಿಸಿಕೊಂಡ ನಂತರ ಐ ತೀರ್ಪು ಆದ ನಂತರ ಯಾವಾಗ ರೆಫರೆನ್ಸ ಹಾಕಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಸರಕಾರದವರು ಭೂ ಸ್ವಾಧೀನ ಮಾಡಬೇಕಾದರೆ ನೋಟೀಸ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಭೂಮಿಯು ನನ್ನ ಅಜ್ಜನ ಹೆಸರಿನಲ್ಲಿ ಇದ್ದುದರಿಂದ ನನಗೆ ಗೊತ್ತಾಗಿರುವುದಿಲ್ಲ ಎಂದು ಹೇಳುತ್ತಾರೆ. ನೋಟೀಸಿನ ಬಗ್ಗೆ ನನಗೆ ಮಾಹಿತಿ ಇದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1 ನೇ ಎದರುದಾರರ ಕಚೇರಿಯಲ್ಲಿ ವಿಚಾರಿಸಿದಾಗ ಭೂ ಸ್ವಾಧೀನ ಮಾಡಿರುವ ಬಗ್ಗೆ ತಿಳಿದಿರುತ್ತದೆ ಎಂದು ಸುಳ್ಳಾಗಿ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ವಿಳಂಬವಾಗಿರುವ ಕಾರಣಗಳನ್ನು ಮುಚ್ಚಿ ಹಾಕಲು ಸುಳ್ಳು ಮಾಹಿತಿಯನ್ನು ನನ್ನ ಸಾಕ್ಷಿ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ವಿಶೇಷ ಭೂ ಸ್ವಾಧೀನ ಅಧಿಕಾರಿಗಳು ಮತ್ತು ಸರ್ವೆಯವರು ನಮ್ಮ ಜಮೀನಿಗೆ ಬಂದು ಸರ್ವೆ ಮಾಡಿರುವ ಬಗ್ಗೆ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ಒಣ ಬೇಸಾಯ ಇರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವೆರದು ನಮ್ಮ ಜಮೀನಿನ ಪಕ್ಕದಲ್ಲಿ ಬೋರ ಇದ್ದು ಅವರಿಂದ ನೀರು ಪಡೆದುಕೊಂಡು ಬೇಸಾಯ ಮಾಡುತ್ತೇವೆ ಎಂದು ಹೇಳುತ್ತಾರೆ. ಈ ವಿಷಯವನ್ನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾರಿಂದ ಮತ್ತು ಯಾರ ಜಮೀನಿನಿಂದ ಮತ್ತು ಯಾವ ಸರ್ವೆ ನಂಬರಿನ ಜಮೀನಿ ನಿಂದ ನೀರು ತೆಗೆದುಕೊಂಡಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. 1 ಎಕರೆಗೆ 12 ಸಾವಿರ ರೂ.ಗಳ ಆದಾಯ ಬರುತ್ತದೆ ಎಂದು ದಾಖಲೆಗಳನ್ನು ಕೊಟ್ಟಿರುತ್ತೇವೆ. ಪ್ರತಿ ಎಕರೆಗೆ 20 ಲಕ್ಷ ರೂ. ಆಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಿಸಲದಿನ್ನಿ

ಜಮೀನು ಬಹಳ ಫಲವತ್ತತೆಯಿಂದ ಕೂಡಿದೆ ಎಂದು ದಾಖಲೆ ಹಾಜರು ಪಡಿಸಿರುತ್ತೇನೆ . ಇಳುವರಿ ಮತ್ತು ಮಣ್ಣಿನ ಗುಣಧರ್ಮದ ಸರ್ಟಿಫೀಕೇಟಗಳನ್ನು ಹಾಜರು ಪಡಿಸಿರುತ್ತೇನೆ. ನಾನು ಈ ದಾಖ್ಲಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನಿ ನಿಂದ ಕೂಡಲಸಂಗಮ, ವರಗೋಡದಿನ್ನಿ ಜಮೀಪ ಇರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ತೀರ್ಪುಗಳಲ್ಲಿರುವ ಜಮೀನುಗಳ ಗುಣ ಮಟ್ಟಕ್ಕು ಮತ್ತು ನಮ್ಮ ಜಮೀನಿನ ಗುಣಮಟ್ಟಕ್ಕೂ ತುಂಬಾ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ಕ್ರಯ ಪತ್ರಗಳಲ್ಲಿ ಇರುವ ಜಮೀನುಗಳ ಗುಣ ಮಟ್ಟಕ್ಕು ಮತ್ತು ನಮ್ಮ ಜಮೀನಿನ ಗುಣಮಟ್ಟಕ್ಕೂ ತುಂಬಾ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಸರಕಾರದವರು ಕೊಟ್ಟಿರುವ ಪರಿಹಾರದ ಹಣವು ಸರಿ ಇರುತ್ತದೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರದ ಹಣವನ್ನು ಪಡೆಯುವದಕ್ಕೊಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು, ಹುನಗುಂದ.